# ಬೊಮ್ಮಘಟ್ಟ ಶ್ರೀಹುಲಿಕುಂಟೆಸ್ವಾಮಿ ರಥೋತ್ಸವ

**ಫಾಲ್ಗುಣ ಶುದ್ಧ ದಶಮಿ** **ಬೊಮ್ಮಘಟ್ಟ : ಪ್ರಾಣದೇವರ ಪ್ರಸಿದ್ಧ ಪುಣ್ಯ ಕ್ಷೇತ್ರ**

ವಿಜಯನಗರ ಸಾಮ್ರಾಜ್ಯದ ಕೇಂದ್ರ ಸ್ಥಳವಾದ ಹಂಪಿಯಿಂದ ದಕ್ಷಿಣಕ್ಕೆ ಸುಮಾರು 30 ಕಿ.ಮೀ. ದೂರದಲ್ಲಿರುವ ಪ್ರಸಿದ್ಧ ಕುಮಾರಸ್ವಾಮಿ ಬೆಟ್ಟದ ದಕ್ಷಿಣ ಭಾಗದಲ್ಲಿ (ಬಳ್ಳಾರಿ ಜಿಲ್ಲಾ ಸೊಂಡೂರು ತಾಲ್ಲೂಕಿನಲ್ಲಿ) ಬೊಮ್ಮಘಟ್ಟ ಕ್ಷೇತ್ರವಿದೆ. ಪೂರ್ವದಲ್ಲಿ ಈ ಗ್ರಾಮಕ್ಕೆ ಬ್ರಹ್ಮಘಟ್ಟ ಎಂದು ಹೆಸರಿತ್ತೆಂದೂ, ಈ ಸಂಸ್ಕೃತ ಶಬ್ದದ ತದ್ಭವ ರೂಪವೇ ಬೊಮ್ಮಘಟ್ಟ ಎಂದೂ ಹೇಳಲಾಗುತ್ತದೆ. ಪ್ರಾಣದೇವರ ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲಿ ಒಂದಾದ ಬೊಮ್ಮಘಟ್ಟ ಒಂದು ಜಾಗ್ರತ ಕ್ಷೇತ್ರ. ಪ್ರಾಣದೇವರು ಇಲ್ಲಿ ಶ್ರೀ ಹುಲಿಕುಂಟೆಸ್ವಾಮಿ ಎಂದು ಪ್ರಸಿದ್ಧನಾಗಿದ್ದಾನೆ. ಈ ಕ್ಷೇತ್ರಕ್ಕೆ ತನ್ನದೇ ಆದ ಹಿನ್ನಲೆ, ಮಹತ್ವ ಹಾಗೂ ಐತಿಹ್ಯಗಳಿವೆ. ಜಗತ್ಪ್ರಸಿದ್ಧ ಪ್ರಾಣದೇವರು ಸತ್ಯಲೋಕದಿಂದ ಆಗಮಿಸಿ ಈ ಗ್ರಾಮದ ಹುಲಿಕುಂಟೆ ಕೆರೆಯ ದಡದ ಹತ್ತಿರ ಹುಲಿಪೊದೆಯೊಂದರಲ್ಲಿ ಗೂಢವಾಗಿ ನೆಲೆಸಿದ್ದ–ರೆಂದು ಪ್ರತೀತಿ. ಈ ಸುಂದರ ವಿಗ್ರಹದ ಮೇಲೆ ಸೂರ್ಯ–ಚಂದ್ರರ ಲಾಂಛನಗಳಿರುವುದರಿಂದ ಇದು ಜನಮೇಜಯರಾಜನಿಂದ ಪ್ರತಿಷ್ಠೆಗೊಂಡಿದೆ ಎಂದು ಇಲ್ಲಿನ ಭಕ್ತರು ನಂಬುತ್ತಾರೆ. ಕಾಲಕ್ರಮದಲ್ಲಿ ನೈಸರ್ಗಿಕ ಏರುಪೇರುಗಳಿಂದಾಗಿ ಮೂರ್ತಿ ಭೂಗತವಾಗಿತ್ತು.

**ಐತಿಹ್ಯ :–**ಶತಮಾನಗಳ ಹಿಂದೆ ಬೊಮ್ಮಯ್ಯನೆಂಬ ಗೋವಳ ಇಲ್ಲಿ ವಾಸವಾಗಿದ್ದ. ಅವನ ಗೋವುಗಳ ಹಿಂಡಿನಲ್ಲಿ ತೇಜಸ್ವಿಯೆಂಬ ಹಸುವೊಂದು ಬಂದು ಸೇರಿತು. ಈ ಹಸು ಮೇಯಲು ಹೋದಾಗ ಗೋವಳನ ಕಣ್ಣು ತಪ್ಪಿಸಿ ಎಲ್ಲಿಗೋ ಹೋಗಿ ರಾತ್ರಿ ಹೊತ್ತಿಗೆ ಮತ್ತೆ ಹಿಂಡು ಸೇರುತ್ತಿತ್ತು. ರಾತ್ರಿ ಹಾಲು ಕರೆಯಲು ಹೋದರೆ ಈ ಹಸುವಿನ ಕೆಚ್ಚಲು ಬರಿದಾಗಿರುತ್ತಿತ್ತು.

ಈ ವಿಸ್ಮಯವನ್ನು ಪರೀಕ್ಷಿಸಲು ಗೋವಳನು ಒಂದು ದಿನ ಈ ಹಸುವನ್ನು ಹಿಂಬಾಲಿಸಿದಾಗ ಅದು ಒಂದು ಹುಲ್ಲುಪೊದೆ ಮೇಲೆ ನಿಂತು, ಧಾರಾಕಾರವಾಗಿ ಅಮೃತ ಕ್ಷೀರಧಾರೆ ಹರಿಸುತ್ತಿರುವುದು ಕಂಡಿತು. ಇದರಿಂದ ಕೋಪಗೊಂಡ ಗೋವಳ ಅದನ್ನು ಹೊಡೆಯಲು ಹೋದಾಗ ಅದು ಮಾಯವಾಯಿತು. ಅಂದು ರಾತ್ರಿ ಗೋವಳನಿಗೆ ಹನುಮಂತನು ಕನಸಿನಲ್ಲಿ ಬಂದು ನಾನು ಪ್ರಭುವಿನ ಆಜ್ಞೆಯಂತೆ ಈವರೆಗೆ ಅಜ್ಞಾತವಾಗಿದ್ದೆ. ಈಗ ಭಕ್ತರಿಗೆ ದರ್ಶನ ನೀಡಿ ಅವರ ಇಷ್ಟಾರ್ಥಗಳನ್ನು ಈಡೇರಿಸಲು ಪ್ರಕಟಗೊಳ್ಳುತ್ತೇನೆ. ಈ ಗ್ರಾಮದ ಕರಣಿಕರಿಗೆ ಈ ಘಟನೆಯನ್ನು ತಿಳಿಸಿ ಹುಲ್ಲುಪೊದೆಯೊಳಗಿರುವ ನನ್ನನ್ನು ಸ್ಥಾಪಿಸಲು ಹೇಳು' ಎಂದು ಹೇಳಿದ. ಮರುದಿನ ಈ ವಿಷಯವನ್ನು ಕರಣಿಕರಿಗೆ ತಿಳಿಸಿದಾಗ ಗ್ರಾಮಸ್ಥರೆಲ್ಲ ಮೆರವಣಿಗೆ ಮೂಲಕ ಹೋಗಿ ಪೊದೆಯನ್ನು ಬಿಡಿಸಿದಾಗ ದಿವ್ಯವಾದ ಹನುಮಂತನ ವಿಗ್ರಹವೊಂದು ಅಲ್ಲಿ ಕಂಗೊಳಿಸುತ್ತಿತ್ತು (ಈಗ ಬೊಮ್ಮಘಟ್ಟದಲ್ಲಿ ಪ್ರತಿಷ್ಠಾಪಿತವಾಗಿರುವ ವಿಗ್ರಹವೇ ಇದು). ದುಷ್ಟರನ್ನು ಶಿಕ್ಷಿಸಲು ಎತ್ತಿದ ಕೈ ಹಾಗೂ ಬಾಲ ಹನುಮಂತನ ಅವತಾರದ ಸೂಚಕಗಳಾದರೆ, ದುರ್ಯೋಧನಾದಿ ದುಷ್ಟರನ್ನು ಸದೆಬಡಿದ

ಭೀಮಸೇನನ ಗದೆಯ ಕುರುಹು ಎಡಗೈಯಲ್ಲಿ, ಮಧ್ವಾಚಾರ್ಯರ ಲಾಂಛನಗಳಾದ ತುಳಸಿ ಮಾಲೆ ಕೊರಳಲ್ಲಿ ಮತ್ತು ಪಾದುಕೆಗಳು ಕಾಲಲ್ಲಿ. ಹೀಗಾಗಿ ಹನುಮ, ಭೀಮ, ಮಧ್ವರ ಅವತಾರತ್ರಯದ ಕುರುಹುಗಳು ಸಮ್ಮಿಳನಗೊಂಡ ಮೂರ್ತಿಯನ್ನು ಸ್ಥಾಪನೆ ಮಾಡಿ ಪೂಜೆ ಗೈಯಲಾಯಿತು. ಈ ದಿವ್ಯ ಮೂರ್ತಿಯು ಹುಲ್ಲಿನ ಪೊದೆಯಲ್ಲಿ ಕಾಣಿಸಿಕೊಂಡಿದ್ದರಿಂದ ಇದನ್ನು ಶ್ರೀಹುಲಿಕುಂಟೆ ಮುಖ್ಯಪ್ರಾಣದೇವರೆಂದೇ ನಾಮಕರಣ ಮಾಡಿದರು. ಕ್ರಿ.ಶ.೧೮೦೭ರಲ್ಲಿ ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಪರಂಪರೆಯಲ್ಲಿ ಬಂದ ಶ್ರೀ ಸುಬೋಧೇಂದ್ರ ತೀರ್ಥರು, ಶ್ರೀ ಸುಜನೇಂದ್ರ ತೀರ್ಥರಿಗೆ ಈ ಪುಣ್ಯ ಕ್ಷೇತ್ರದಲ್ಲಿಯೇ ಆಶ್ರಮ ಕೊಟ್ಟಿದ್ದಾರೆ. ಶ್ರೀ ಸುಜನೇಂದ್ರರು ನಂಜನಗೂಡು ಪ್ರದೇಶದಲ್ಲಿ ಸೂರ್ಯೋಪಾಸಕರಾದ ಶ್ರೀರಾಮಶಾಸ್ತ್ರಿ ಎಂಬ ವಿದ್ವಾಂಸರನ್ನು ವಾಗ್ವಾದದಲ್ಲಿ ಗೆದ್ದು ಅವರ ೧೭೮ ಜಯ ಪತ್ರಗಳನ್ನು ಪಡೆದರು. ಆ ಸಂತೋಷದ ಕುರುಹಾಗಿ ದೇವಸ್ಥಾನದಲ್ಲಿ ಶ್ರೀ ರಾಮ, ಸೀತೆ, ಲಕ್ಷ್ಮಣ, ಆಂಜನೇಯ ಹಾಗೂ ಗರುಡ ವಿಗ್ರಹಗಳನ್ನು ಪ್ರತಿಷ್ಠಾಪಿಸಿದರು. ಮಾಧ್ವಮತಾಧಿ–ಪತಿಗಳೆಲ್ಲ ಈ ಕ್ಷೇತ್ರಕ್ಕೆ ಚಿತ್ತೈಸಿ ಪಾವನಗೊಳಿಸಿದ್ದಾರೆ. ಮೈಸೂರು ದೊರೆ ಮುಮ್ಮಡಿ ಕೃಷ್ಣದೇವರಾಯ ಒಡೆಯರ್ ಅವರ ದಿವಾನರಾಗಿದ್ದ ಶ್ರೀ ಪೂರ್ಣಯ್ಯನವರು ಈ ಪ್ರಾಂತದಲ್ಲಿ ಸಂಚಾರ ಕೈಗೊಂಡು ಶ್ರೀ ಸ್ವಾಮಿಯ ಸೇವೆಗೈದರೆಂದು ತಿಳಿದು ಬರುತ್ತದೆ. ದೇವಾಲಯದ ಮೇಲಿನ ದಶಾವತಾರದ ವಿಗ್ರಹಗಳ ಗೋಪುರಗಳು ಅವರೇ ಮಾಡಿಸಿದರೆಂದು ಪ್ರತೀತಿ.

ಇತ್ತೀಚಿನ ವರ್ಷಗಳಲ್ಲಿ ಶ್ರೀಸ್ವಾಮಿಯ ಭಕ್ತಾದಿಗಳಿಂದ ಮಹಾದ್ವಾರದ ಗೋಪುರ, ಗರ್ಭಗುಡಿ ಗೋಪುರ, ಪ್ರಾಂಗಣದ ರಿಪೇರಿ, ನವಗ್ರಹಗಳ ಪ್ರತಿಷ್ಠಾಪನೆ, ಗರುಡಗಂಬ ಸ್ಥಾಪನೆ ಮುಂತಾದ ಅಭಿವೃದ್ಧಿ ಕಾರ್ಯಕ್ರಮಗಳು ನಡೆದಿವೆ. ಪ್ರತಿವರ್ಷ ಫಾಲ್ಗುಣ ಶುದ್ಧ ಪಂಚಮಿಯಿಂದ ದ್ವಾದಶಿಯ ವರೆಗೆ ಎಂಟು ದಿನ ಸತತವಾಗಿ ಹನುಮದ್ ವಾಹನೋತ್ಸವ, ಅಶ್ವವಾಹನೋತ್ಸವ, ಕಲ್ಯಾಣೋತ್ಸವ, ಗರುಡೋತ್ಸವ, ಗಜವಾಹನೋತ್ಸವ, ಮುಂತಾದ ಉತ್ಸವಗಳು, ನವಗ್ರಹ ಹೋಮ, ವಾಸ್ತು ಹೋಮ ಮತ್ತು ಪವಮಾನ ಹೋಮ ಮುಂತಾದ ಹೋಮಗಳು ಹಾಗೂ ದಶಮಿಯಂದು ಶ್ರೀ ಬ್ರಹ್ಮ ರಥೋತ್ಸವಗಳು ವಿಜೃಂಭಣೆಯಿಂದ ನಡೆಯುತ್ತವೆ.

**COLLECTION BY RAMANATH BHATTARAHALLI**